ಪ್ರವಾಸೋದ್ಯಮ ಬಾರ್, ವೈನ್‌ಶಾಪ್ ಪರವಾನಿಗೆ ನಿಯಮಗಳು

1333 (866) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರವಾಸೋದ್ಯಮ ಬಾರ್, ವೈನ್ ಶಾಪ್ (CL-2) ಪರವಾನಿಗೆ ನೀಡುವಾಗ ಅನುಸರಿಸುವ ನಿಯಮಾವಳಿಗಳೇನು? (ವಿವರ ತಿಳಿಸುವುದು)

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ಸಿಎಲ್-7 (ಹೋಟೇಲ್ ಮತ್ತು ಬೋರ್ಡಿಂಗ್) ಮತ್ತು ಸಿಎಲ್- 9 (ರೆಫ್ರೆಶ್‌ಮೆಂಟ್ ರೂಮ್- ಬಾರ್) ಗಳನ್ನು ನೀಡಲ್ಲಾಗಿದೆ. ಅವುಗಳನ್ನು ನೀಡುವಾಗ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗಿದೆ:

1. ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 5 ರ ಪ್ರಕಾರ ಸನ್ನದು ಸ್ಥಳ ಆಕ್ಷೇಪಣಾರಹಿತವಾಗಿರಬೇಕು.
2. ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3 ರಲ್ಲಿ ದಿನಾಂಕ 1.7.2002 ರಿಂದ ನಿಗದಿಪಡಿಸಿರುವಂತೆ ಕಾರ್ಪೋರೇಷನ್ ಪ್ರದೇಶದಲ್ಲಿನ ಹೋಟೆಲ್ / ಬೋರ್ಡಿಂಗ್ ಹೌಸ್‌ಗಳು 30 ಜೋಡಿ ಕೊಠಡಿಗಳು ಮತ್ತು ಇತರೆ ಪ್ರದೇಶದಲ್ಲಿ 20 ಜೋಡಿ ಕೊಠಡಿಗಳ ವಸತಿ ಸೌಲಭ್ಯ ಹೊಂದಿರಬೇಕು.
3. ದಿನಾಂಕ 1.7.2002 ಕ್ಕಿಂತ ಮುಂಚೆ ಕನಿಷ್ಠ 10 ಜೋಡಿ ಕೊಠಡಿಗಳ ವಸತಿ ಸೌಲಭ್ಯ ಹೊಂದಿದ್ದ ಹೋಟೆಲ್ / ಬೋರ್ಡಿಂಗ್ ಹೌಸ್‌ಗಳು.
4. ಹೋಟೆಲ್ / ಬೋರ್ಡಿಂಗ್ ಹೌಸ್‌ಗಳು ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದಿರಬೇಕು ಮತ್ತು ಆ ಇಲಾಖೆಯಿಂದ ಸನ್ನದು ನೀಡಲು ಪ್ರಸ್ತಾವನೆ ಬಂದಿರಬೇಕು.

ಪ್ರವಾಸೋದ್ಯಮದಡಿ ಸಿಎಲ್-2 (ಚಿಲ್ಲರೆ ಮದ್ಯದಂಗಡಿ ಸನ್ನದು) ನೀಡುವುದಿಲ್ಲ. ಅಂತಹ ಅಂಗಡಿಗಳಿಗೆ ಸನ್ನದು ನೀಡುವಾಗ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 4 ರಿಂದ 5 ಮತ್ತು 12ನ್ನು ಅನುಸರಿಸಲಾಗುವುದು.

ಔರಾದ ತಾಲ್ಲೂಕಿನ ಸಂತಾಪುರ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಾಣ

1334 (1967) ಶ್ರೀ ಗುಂಡಪ್ಪ ವಕೀಲ್ (ಔರಾದ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನ ಸಂತಾಪೂರ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ 2001 2002ನೇ ಸಾಲಿನಲ್ಲಿ 5.00 ಲಕ್ಷ ರೂಪಾಯಿಗಳನ್ನು ನೀಡಲಾಗಿದ್ದರೂ, ಇದುವರೆವಿಗೆ ಕಾಮಗಾರಿ ಪ್ರಾರಂಭಿಸದೇ ಇರಲು ಕಾರಣವೇನು;

ಆ) ಸದರಿ ಕಾಮಗಾರಿ ಈ ವರ್ಷ ಪ್ರಾರಂಭಿಸಲಾಗುತ್ತದೆಯೇ; ಇಲ್ಲದಿದ್ದಲ್ಲಿ, ಅನುದಾನ ಹಿಂತಿರುಗಿಸಲಾಗುತ್ತದೆಯೇ?

ಶ್ರೀ ರಮಾನಾಥ ರೈ (ಸಾರಿಗೆ ಸಚಿವರು) :